ಅಂಶಗಳು ಹಲವಿವೆ. ಯೂಟ್ಯೂಬ್ ಅನ್ನು ಆದಾಯದ ಮಾರ್ಗವಾಗಿ ಬಳಸಿಕೊಳ್ಳುವಂತಿದ್ದರೆ ಕೆಲವು ಪ್ರಾಥಮಿಕ ಸಂಗತಿಗಳನ್ನು ತಿಳಿದಿರಲೇಬೇಕಾಗುತ್ತದೆ.

## ಮೊದಲಿಗೆ ಹೀಗೆ ಮಾಡಿ

ಗೂಗಲ್ ಮಾಲೀಕತ್ವದ ಯೂಟ್ಯೂಬ್ ವಿಡಿಯೊ ತಾಣದಲ್ಲಿ ಯಾರು ಬೇಕಾದರೂ ಚಾನಲ್ ಆರಂಭಿಸಬಹುದು. ಅದಕ್ಕೆ ನಿಬಂಧನೆಗಳಿಲ್ಲ. ಯಾವುದೇ ಶುಲ್ಕವೂ ಇಲ್ಲ. ನಿಮ್ಮ ಜಿಮೇಲ್ ಖಾತೆಯಿಂದ ಯೂಟ್ಯೂಬ್‌ಗೆ ಲಾಗಿನ್ ಆಗಿ, ನಿಮ್ಮ ಚಿತ್ರ ಅಪ್‌ಲೋಡ್ ಮಾಡಿದರೆ ಖಾತೆ ತೆರೆದಂತೆ. ನಂತರ ವಿಡಿಯೊಗಳನ್ನು ಅಪ್‌ಲೋಡ್ ಮಾಡುವ ಸರದಿ.

ಚಾನಲ್‌ಗೆ ಚಂದಾದಾರರು ಹೆಚ್ಚಾಗುತ್ತಿದ್ದಂತೆ ವಿಡಿಯೊಗಳನ್ನು 'ಆಡ್ ಸೆನ್ಸ್' ಪ್ರಕ್ರಿಯೆಗೆ, ಅಂದರೆ ವಿಡಿಯೊಗಳಲ್ಲಿ ಜಾಹೀರಾತು ಬರುವ ಹಾಗೆ ಮಾಡಬೇಕು. ಗೂಗಲ್ ಆಡ್‌ಸೆನ್ಸ್ ಖಾತೆ ತೆರೆಯಲು ಹೆಸರು, ವಿಳಾಸ, ಬ್ಯಾಂಕ್ ವಿವರಗಳನ್ನು ಕೊಟ್ಟರೆ, ಹದಿನೈದು ದಿನಗಳಲ್ಲಿ ಖಾತೆಗೆ ಸಂಬಂಧಿಸಿದಂತೆ 'ಒಟಿಪಿ'ಯನ್ನು ಮನೆಯ ವಿಳಾಸಕ್ಕೆ ಗೂಗಲ್ ಕಳುಹಿಸುತ್ತದೆ. ನಂತರ ಅದನ್ನು 'ಆಡ್ ಸೆನ್ಸ್' ಅಕೌಂಟ್‌ನಲ್ಲಿ ತುಂಬಬೇಕು. ಇದಕ್ಕೆ ಮೊದಲು ಯೂಟ್ಯೂಬ್ ಪಾರ್ಟ್‌ನರ್ ಪ್ರೋಗ್ರಾಂಗೆ ಸೇರಬೇಕು.

## ಇವಿಷ್ಟು ನೆನಪಿಡಿ...

ಇಂದು ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಸಾವಿರಾರು ಯೂಟ್ಯೂಬ್ ಚಾನಲ್‌ಗಳು ಸಿಗುತ್ತವೆ. ಸಹಜವಾಗಿ ಸ್ಪರ್ಧೆಯೂ ಹೆಚ್ಚಿದೆ. ಈ ಸ್ಪರ್ಧೆಯ ನಡುವೆ ಜನರು ನಿಮ್ಮದೇ ಚಾನಲ್ ಹುಡುಕಬೇಕು, ನೀವು ಗಟ್ಟಿಯಾಗಿ ನಿಲ್ಲಬೇಕು ಎಂದರೆ ನಿಮ್ಮ ಚಾನಲ್ ವಿಭಿನ್ನವಾಗಿರಲೇಬೇಕು. ನಿಮ್ಮ ಅಭಿರುಚಿ ಏನು? ಅದನ್ನು ಹೇಗೆ ಭಿನ್ನವಾಗಿ, ಜನರಿಗೆ ಮೆಚ್ಚುಗೆಯಾಗುವಂತೆ ವಿಡಿಯೊ ಮಾಡಿ ಪ್ರಸ್ತುತಪಡಿಸಬಹುದು ಎಂಬುದರ ಕುರಿತು ಯೋಚಿಸಬೇಕು. ನಿರಂತರವಾಗಿ ಜನರನ್ನು ಕಾಯ್ದಿಟ್ಟುಕೊಳ್ಳುವಂಥ ವಿಷಯ ನಿಮ್ಮದಾಗಿರಬೇಕು.

**ವಿಷಯದ ಸ್ಪಷ್ಟತೆ ಮುಖ್ಯ:** ಯೂಟ್ಯೂಬ್ ಎಷ್ಟು ಬೆಳವಣಿಗೆ ಹೊಂದಿದೆಯೋ ಅದರ ಬಗ್ಗೆ ಋಣಾತ್ಮಕ ಅಭಿಪ್ರಾಯಗಳೂ ಇವೆ. ಯೂಟ್ಯೂಬ್‌ನಲ್ಲಿ ಸುಳ್ಳು ಸುದ್ದಿಗಳು ಹೆಚ್ಚು ಪ್ರಚಾರವಾಗುತ್ತವೆ ಎಂಬ ಅಭಿಪ್ರಾಯ ಸಾಕಷ್ಟು ಮಂದಿಯಲ್ಲಿದೆ. ಈ ನಡುವೆ ನಿಮ್ಮ ಚಾನಲ್ ಹೆಸರು ಗಳಿಸಬೇಕೆಂದರೆ ವಿಷಯ, ನಿಮ್ಮ ಕ್ಷೇತ್ರದ ಅರಿವು ಕೂಡ ಸ್ಪಷ್ಟವಾಗಿರಬೇಕು. ಸರಳ ಭಾಷೆಯಲ್ಲಿ ಜನರಿಗೆ ವಿಷಯ ತಲುಪುವಂತೆ ಮಾಡುವುದು ಈಗಿನ ಬಹುದೊಡ್ಡ ಸವಾಲು. ವಿಷಯ ಏನು? ಅದರಲ್ಲಿ ನೀವು ಏನು ಹೇಳಲು ಬಯಸಿದ್ದೀರಿ ಎಂಬುದರ ಸ್ಪಷ್ಟತೆ ನಿಮಗಿರಲಿ. ಹಲವು ಕಡೆ ನಿಮಗೆ ದೊರೆತಿರುವ ಮಾಹಿತಿಯನ್ನು ಪರಿಶೀಲಿಸುವುದು ಅವಶ್ಯ. ಜನರಿಗೆ ಇಷ್ಟವಾಗುವುದರೊಂದಿಗೆ ವಿಶ್ವಾಸ, ನಂಬಿಕೆ ಸೃಷ್ಟಿಸುವುದು ಕೂಡ ಜವಾಬ್ದಾರಿಯೇ ಆಗಿರುತ್ತದೆ.

**ಗುಣಮಟ್ಟದ ವಿಡಿಯೊ:** ಜನರನ್ನು ಸೆಳೆಯುವಲ್ಲಿ ವಿಡಿಯೋ ಗುಣಮಟ್ಟ ಕೆಲಸ



